COCONUT PICK-UPS

415. SRI T. M. MANJUNATH (Tiptur).—

Will the Minitser for Agriculture and Forests be pleased to state.—

the action taken for providing Coconut pick-ups in the Coconut growing areas in the State in general and in Tiptur taluk in particular?

SRI K. H. PATIL.—(Minister for Agriculture and Forests)

A scheme formulated for the entire State is under examination.

ಶ್ರೀ ಟಿ. ಎಂ. ಮಂಜುನಾಥ.—ಇದು ಬಹಳ ಮುಖ್ಯವಾದ ಕೆಲಸ. ಈಗ ಮೇಜರ್ ಇರಿಗೇಷನ್‌ಗೆ ಆದ್ಯತೆ ಕೊಡುವುದಕ್ಕಿಂತ ಹೆಚ್ಚು ಆದ್ಯತೆ ತೆಂಗಿನ ಬೆಳೆಗೆ ಕೊಟ್ಟು ಬೈಲು ಸೀಮೆಯಲ್ಲಿ ಆಣೆಕಟ್ಟುಗಳನ್ನು ಕಟ್ಟಲು ಪ್ರಯತ್ನಮಾಡುವುದನ್ನು ಪರಿಶೀಲಿಸುವಿರಾ ?

‡ಶ್ರೀ ಕೆ. ಎಚ್. ಪಾಟೀಲ್.—ತೆಂಗಿನ ಬೆಳೆಯನ್ನು ಎಲ್ಲ ಕಡೆಗೂ ವಿಸ್ತರಿಸಬೇಕೆಂಬ ಇಚ್ಛೆಯಿದೆ. ಅದಕ್ಕೆ ಬೇಕಾದ ಹವ ಮತ್ತು ನೀರಿನ ಸೌಕರ್ಯ ಎಲ್ಲಿದೆ, ಸರಕಾರಕ್ಕೆ ಎಷ್ಟುಮಟ್ಟಿಗೆ ಹಣದ ಅನುಕೂಲವಿದೆ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಯೋಜನೆ ತಯಾರಾದಮೇಲೆ ಅದನ್ನು ಸಭೆಯ ಮುಂದಿಡುತ್ತೇವೆ.

ಶ್ರೀ ಎನ್. ಬಸವಯ್ಯ.—ಮಳೆಯ ಮೇಲೆ ಹೆಚ್ಚು ಅವಲಂಬಿಸಿಲ್ಲದ ಈ ಬೆಳೆಗೆ ಮಳೆ ಕಡಿಮೆ ಇರುವ ಜಾಗದಲ್ಲಿ ಬೆಳೆಸಲು ಸಹಾಯ ಮಾಡುವಿರಾ ?

ಶ್ರೀ ಕೆ. ಎಚ್. ಪಾಟೀಲ್.—ಪ್ರೋತ್ಸಾಹ ಕೊಡಬೇಕಾದ ಕಡೆ ಶಕ್ಯವಿರುವಷ್ಟು ಕೊಡಲು ಪ್ರಯತ್ನ ಮಾಡಲಾಗುವುದು.

ಶ್ರೀ ಟಿ. ಎಂ. ಮಂಜುನಾಥ.—ಮುಖ್ಯವಾಗಿ ಬೈಲು ಸೀಮೆಯಲ್ಲಿ ಪಿಕಪ್ ಒದಗಿಸಲು ತಕ್ಷಣ ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಇದು ಮಹತ್ವದ ವಿಷಯ. ಸರಕಾರ ಸಾಧ್ಯವಾದಷ್ಟು ತೀವ್ರವಾಗಿ ಈ ವಿಚಾರ ಪರಿಶೀಲಿಸುವುದು. ಇದಕ್ಕೆ ಸಂಬಂಧಪಟ್ಟ ಯೋಜನೆಯಾಗುವ ವರೆಗೆ ಕಾರ್ಯಗತ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳ ಕಾಲ ಮುಗಿಯಿತು.

QUESTIONS FOR ANSWERS ON THE DAY (BUT NOT TAKEN UP)

RELIEF AGAINST AGRICULTURAL INDEBTEDNESS

467. SRI G. PUTTASWAMY (Mudigere).—

Will the Minister for Co-operation be pleased to state.—

(a) whether the Government is aware that at present, there is no provision of Law for providing relief against agricultural indebtedness ;

(b) if so, the action taken in the matter to provide relief ?